ಕವಾಬಟ ನೊಬೆಲ್ ಪ್ರಶಸ್ತಿ ಪುರಸ್ಕೃತ ಜಪಾನ್‌ನ ಮೊದಲ ಲೇಖಕ ಎನ್ನುವುದನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು.

ಜಗತ್ತಿನ ಅನೇಕರನ್ನು ಸೆಳೆಯುವ ಅದೆಂತದೊ ಮಾಂತ್ರಿಕಶಕ್ತಿಯನ್ನು ಜಪಾನ್ ಹೊಂದಿದೆಯೇನೊ! ಬುದ್ಧನ ಸೌಮ್ಯ ನಗುವನ್ನು ಹೊಂದಿರುವಂತೆಯೇ ಅದು ಸಮುರಾಯ್ ಎಂಬ ಯುದ್ಧಕಲೆಯ ಹಿಂಸಾತ್ಮಕ ತಂತ್ರವನ್ನೂ ಹೊಂದಿದೆ. ಪುಟ್ಟ ದೇಶದೊಳಗೆ ಅವೆಷ್ಟು ವೈರುಧ್ಯಗಳು! ಆಕಾಶದೆತ್ತರದ ಪಶ್ಚಿಮದ ತಂತ್ರಜ್ಞಾನಗಳು, ಮಣ್ಣುಕೊರೆಯುವ ಪ್ರಾಚೀನ ವ್ಯವಸಾಯ, ರಾಜಪ್ರಭುತ್ವದ ಪಳೆಯುಳಿಕೆಗಳು, ಅವುಗಳ ವಿರೋಧಿ ಹೋರಾಟಗಳು, ಚೀನಾ ವಿರುದ್ಧದ ಅದರ ದೀರ್ಘ ಸಂಘರ್ಷಗಳು, ಹಿಟ್ಲರನ ಕನಸಿಗೆ ಇಂಬು ಕೊಟ್ಟು ಮುನ್ನುಗ್ಗಿದ್ದು, ಅಣುಬಾಂಬ್‌ನ ಹೊಡೆತಕ್ಕೆ ನುಚ್ಚು ನೂರಾಗಿದ್ದು, ತಥಾಗತನ ದಿವ್ಯ ಧ್ಯಾನಗಳು, ಹರಾಕಿರಿ ಎಂಬ ಹಿಂಸೆಯ ವಿಭಿನ್ನ ನಿರೂಪಣೆಗಳು... ಹೀಗೆ ಪಟ್ಟಿ ಮಾಡುತ್ತಲೇ ಹೋಗಬಹುದಾದ ಅದರ ಬಹುಮುಖೀ ಸಂಕೀರ್ಣತೆಯ ಸೌಂದರ್ಯ ಒಬ್ಬೊಬ್ಬರಿಗೆ ಒಂದೊಂದು ತೆರನಾಗಿ ಕಾಣಿಸುತ್ತದೆ. ಅದರ ಒಂದು ಮುಖವನ್ನೇ ಹಿಡಿದು ಇದೇ ಜಪಾನ್ ಎಂದರೆ ಅದು ನಮಗೆ ನಾವೇ ಮಾಡಿಕೊಳ್ಳುವ ಮೋಸ. ಮಿಶಿಮಾ, ಕವಾಬಟ, ಸೊಸೆಕಿ, ಕೊಬೊ ಅಬೆಗಳ ಜಪಾನಿಗೂ ಮುರಕಾಮಿ, ಕಜವೊ ಇಜಿಗಾರೊರ ಜಪಾನ್‌ಗೂ ವ್ಯತ್ಯಾಸಗಳಿವೆ ಮತ್ತು ಇರಲೇಬೇಕು. ಅದುವೇ ಕಾಲ ದೇಶಗಳ ನಿಜದ ಸಂಕೀರ್ಣಗಳು. ಈ ವ್ಯತ್ಯಾಸಗಳ ಸಂಕೀರ್ಣತೆಗಳಲ್ಲವೆ ನಮ್ಮೀ ಮನುಷ್ಯ ಲೋಕದ ಬ್ಯೂಟಿ! ಅಂತಹ ಬ್ಯೂಟಿಯೊಂದಕ್ಕೆ ಈ ಬಾರಿ ನೊಬೆಲ್ ಪ್ರಶಸ್ತಿ ಬಂದಿದ್ದು ಅರ್ಥಪೂರ್ಣವಾಗಿದೆ.

## ಕನಕರಾಜ್ ಆರನಕಟ್ಟೆ

ಈಚಿನ ಕನ್ನಡ ಕಥಾ ಸಾಹಿತ್ಯದಲ್ಲಿ ತಮ್ಮದೇ ವಿಶಿಷ್ಟ ದಾರಿಯಲ್ಲಿ ಸಾಗುತ್ತಿರುವ ಪ್ರತಿಭಾಶಾಲಿ ಬರಹಗಾರ ಕನಕರಾಜ್. ಚಿತ್ರದುರ್ಗ ಜಿಲ್ಲೆಯ ಆರನಕಟ್ಟೆಯ ಈ ಲೇಖಕ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕೆಲ ಕಾಲ ಬೆಂಗಳೂರು, ಬಳಿಕ ಮಾಲ್ಡೀವ್ಸ್, ಲಿಬಿಯಾ ದೇಶಗಳಲ್ಲಿ ಅಧ್ಯಾಪಕರಾಗಿದ್ದರು. ಪ್ರಸ್ತುತ ಸೌದಿ ಅರೇಬಿಯಾದ ಪ್ರಿನ್ಸ್ ಸತ್ತಾಮ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರು.

ಇಂಗ್ಲಿಷ್, ಅರೆಬಿಕ್, ತಮಿಳು ಭಾಷೆಗಳ ಬರಹಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. 'ಅದಾದ ಮರುದಿನಕೆ' ಅವರ ಮೊದಲ ಕಥಾ ಸಂಕಲನ. ಎರಡನೇ ಕಥಾ ಸಂಕಲನ 'ಸಿಲೋನ್ ಸೈಕಲ್' ಇತ್ತೀಚೆಗೆ ಪ್ರಕಟವಾಗಿದೆ.